## ಹೀಗಾದರೂ ಮಾಡಬಹುದಲ್ವಾ?

‘ಪ್ಲಾಸ್ಟಿಕ್ ಮುಕ್ತ ಪ್ರಪಂಚ’, ‘ಪ್ಲಾಸ್ಟಿಕ್ ರಹಿತ ಜೀವನ’ ಇತ್ಯಾದಿ ಘೋಷಣೆಗಳನ್ನು ಎಷ್ಟು ಮಾಡಿದರೂ ಅದರ ಮೂಲ ಉದ್ದೇಶವನ್ನು ಅನುಷ್ಠಾನಕ್ಕೆ ತರುವುದು ಕಷ್ಟದ ಕೆಲಸವೆಂಬುದು ಸಾಬೀತಾಗಿದೆ. ಕಡೇಪಕ್ಷ ಅದರ ಹಾವಳಿಯನ್ನಾದರೂ ತಡೆಯಬಹುದಲ್ಲವೇ? ಪ್ಲಾಸ್ಟಿಕ್ ಕವರ್ ಮತ್ತು ಪ್ಲಾಸ್ಟಿಕ್ ಚೂರುಗಳು ಪ್ರಾಣಿ–ಪಕ್ಷಿ ಸಂಕುಲಕ್ಕೆ ಹಾನಿಕಾರಕವಾಗಿದ್ದು, ಅವನ್ನು ಪ್ಲಾಸ್ಟಿಕ್ ಬಾಟಲಿಗೇ ತುರುಕಿ ವಿಲೇವಾರಿ ಮಾಡುವುದು ಸ್ವಲ್ಪಮಟ್ಟಿಗೆ ಒಳ್ಳೆಯ ವಿಧಾನ.

–ವಿ. ವಿಜಯೇಂದ್ರ ರಾವ್, ಬೆಂಗಳೂರು





## ಅಪರೂಪದ ಗಣಪೆ ಮರ

ತೀರ್ಥಹಳ್ಳಿ ತಾಲ್ಲೂಕಿನ ಮಲ್ಲೇಸರ ಗ್ರಾಮದ ನೇರಳೆಹಳ್ಳಿಗೆ ಹೋಗಿದ್ದಾಗ ಒಂದು ಎತ್ತರದ ಮರ ಕಣ್ಣಿಗೆ ಬಿತ್ತು. ಆ ಮರದಲ್ಲಿ ಹಲವು ಕೋಡುಗಳು ನೇತಾಡುತ್ತಿದ್ದದ್ದು ಕುತೂಹಲ ಮೂಡಿಸಿತು. ಅಲ್ಲಿದ್ದವರನ್ನು ಆ ಮರದ ಬಗ್ಗೆ ವಿಚಾರಿಸಿದಾಗ ಅದು ‘ಗಣಪೆ ಮರ’ವೆಂದು ತಿಳಿಯಿತು. ಈ ಮರದ ಒಂದೊಂದು ಕೋಡು ಸುಮಾರು ಐದಾರು ಅಡಿ ಉದ್ದವಿದ್ದು, ಪ್ರತಿ ಕೋಡಿನಲ್ಲಿ ಹತ್ತರಿಂದ ಹದಿನೈದು ಬೀಜಗಳು ಇದ್ದವು. ಈ ಬೀಜಗಳನ್ನು ಔಷಧಕ್ಕಾಗಿ ಉಪಯೋಗಿಸುತ್ತಾರಂತೆ. ಹಾಗೆಯೇ ಮಣ್ಣಿನ ನೆಲಕೆ ಹೊಳಪು ಬರಲು ಕಾಯಿಯಿಂದ ಉಜ್ಜಿ ಉಜ್ಜಿ ಕರಣೆಯಂತೆ (ಸಲಕರಣೆ) ಬಳಸಿ ಹೊಳಪು ತರಿಸುತ್ತಾರೆ. ಬಲಿತ ಕಾಯಿ ಕೆಂಪಗೆ ಇದ್ದು, ಬಲು ಗಟ್ಟಿ ಇರುತ್ತದೆ. ಅಪರೂಪದ ಇಂತಹ ಮರವನ್ನು ನಿವೃತ್ತ ಅರಣ್ಯ ಅಧಿಕಾರಿ ಶ್ರೀನಿವಾಸರಾಯರು ಬಲು ಆಸಕ್ತಿಯಿಂದ ಸಾಕಿ ಬೆಳೆಸುತ್ತಿದ್ದಾರೆ.

–ಅಂಚೆ ಸುಬ್ರಹ್ಮಣ್ಯ, ಕೊಪ್ಪ



ಮೂರೇ ಗೇಣು. ರಾಯಚೂರು ನಗರ ಮಾತ್ರವಲ್ಲದೆ ಸುತ್ತಲಿನ ಹಳ್ಳಿಯವರು, ಬೇರೆ ಊರಿನವರು ಸಹ ವಗ್ಗಣೆಯನ್ನು ಸವಿಯಲು ಇಲ್ಲಿಗೆ ಬರುತ್ತಾರೆ.

ವಿದೇಶಿಯರು, ನಾಡಿನ ಇತರೆ ಜಿಲ್ಲೆಯವರು, ವಿವಿಧ ಸೆಲಿಬ್ರಿಟಿಗಳೂ ಸಹ ಗಂಜ್ ವಗ್ಗಣೆಗೆ ಮನಸೋತಿದ್ದಾರೆ. ವಿಶೇಷವಾಗಿ ಅನೇಕರು ತಮ್ಮ ಶುಭ ಸಮಾರಂಭಗಳಿಗೆ ಗಂಜ್ ವಗ್ಗಣೆಗಾಗಿ ಆರ್ಡರ್ ಕೊಡುತ್ತಾರೆ. ಮುಖ್ಯವಾಗಿ ಇಲ್ಲಿನ ವಗ್ಗಣೆ ಪ್ರವೀಣರನ್ನು ಬೆಂಗಳೂರು ಸೇರಿದಂತೆ ಹಲವೆಡೆಗೆ ಕರೆದೊಯ್ದು ವಗ್ಗಣೆ ಮಾಡಿಸುವವರೂ ಇದ್ದಾರೆ. ನಮ್ಮ ರಾಯಚೂರಿನ ವಗ್ಗಣೆಯನ್ನು ಒಂದು ಸಲವಾದರೂ ಸವಿಯಲೇಬೇಕು. ಒಂದು ಸಲ ಸವಿದರೆ ಖಂಡಿತ ಮತ್ತೆ ಮತ್ತೆ ಗಂಜ್ ವಗ್ಗಣೆಯನ್ನು ಮನ ಬಯಸುವುದರಲ್ಲಿ ಯಾವುದೇ ಅನುಮಾನವಿಲ್ಲ.

–ಈರಣ್ಣ ಬೆಂಗಾಲಿ, ರಾಯಚೂರು

